## ಗೆಸ್ಟ್ ಹೌಸ್‌ಗೆ ಹೋಗತ್ತಾ?

ಕುಟುಂಬದ ಚಿಕ್ಕ ಸಮಾರಂಭದಲ್ಲಿ ನಡೆದ ಘಟನೆ. ಮನೆಗೆ ನೆಂಟರು ಬಹಳ ಜನ ಬಂದಿದ್ದರಿಂದ ಎಲ್ಲರಿಗೂ ಮನೆಯಲ್ಲಿ ಮಲಗಲು ಜಾಗ ಸಾಕಾಗದು ಎಂದು ಹತ್ತಿರದಲ್ಲೇ ಒಂದು ಗೆಸ್ಟ್‌ಹೌಸ್ ಬುಕ್ ಮಾಡಲಾಗಿತ್ತು. ನಮ್ಮ ಬಂಧುಗಳಲ್ಲಿ ಒಬ್ಬರು ಎಲ್ಲಾ ಮಾತಿಗೂ ಹಾಸ್ಯ ಮಾಡುತ್ತ ಎಲ್ಲರನ್ನೂ ನಗಿಸುತ್ತಿದ್ದರು. ಊಟವಾದ ಮೇಲೆ ಅವರಿಗೆ ಗೆಸ್ಟ್‌ಹೌಸ್‌ನಲ್ಲಿ ವ್ಯವಸ್ಥೆ ಮಾಡಿದ್ದು ಹೇಳಿದೆವು. ಅವರು, 'ಅಯ್ಯೋ, ನಮಗೆಲ್ಲ ಗೆಸ್ಟ್‌ಹೌಸ್ ಯಾಕೆ, ಒಂದು ಗೋಣಿಚೀಲ ಇದ್ರೆ ಸಾಕಿತ್ತು. ಮಲಗಿ ಬಿಡ್ತಿದ್ದೆ' ಎಂದರು. ನಾನೂ ತಮಾಷೆಗೆ, 'ನಮ್ಮನೇಲಿ ಒಂದೇ ಗೋಣಿಚೀಲ ಇರೋದು. ಅದರ ಮೇಲೆ ನಮ್ಮ ನಾಯಿ ಮಲಗಿ ಬಿಟ್ಟಿದೆ. ಅದನ್ನೇ ಕೊಡಬೇಕಷ್ಟೆ' ಅಂದೆ. ಅದಕ್ಕವರು, 'ಪಾಪ, ಅದೇನು ಮಾಡುತ್ತೆ? ಗೆಸ್ಟ್‌ಹೌಸ್‌ಗೆ ಹೋಗುತ್ತಾ?' ಎಂದರು.

**ಎನ್.ಪಿ. ಶೈಲಜ**





## ನಾನು ಸ್ವಲ್ಪ ಲೂಸು...

ಕಳೆದ ತಿಂಗಳು ನಮ್ಮ ಬಾಲ್ಯದ ಗೆಳತಿಯರೆಲ್ಲ ಕುಟುಂಬ ಸಮೇತರಾಗಿ ಗೆಳತಿಯೊಬ್ಬಳ ಮನೆಯಲ್ಲಿ ಸೇರಿದ್ದೆವು. ಮಧ್ಯಾಹ್ನದ ಊಟದ ನಂತರ ಎಲ್ಲರೂ ನಮ್ಮ ಬಾಲ್ಯದ ಸಂಗತಿಗಳನ್ನ ನೆನಪಿಸಿಕೊಳ್ಳುತ್ತ ಕೂತೆವು. ಹರಟೆಯ ವಿಷಯ ನಮ್ಮ ಅಂದಿನ ಕಾಲದ ಜಡೆಯ ಸುತ್ತ ಸಾಗಿತು. 'ಆಗೆಲ್ಲಾ ನಮ್ಮ ಕೂದಲು ಎಷ್ಟು ಚೆನ್ನಾಗಿತ್ತಲ್ವಾ...' ಅಂದೆ ನಾನು. ಗೀತಾ, 'ನಮ್ಮಮ್ಮ ಬಿಗಿದು ಎರಡು ಜಡೆ ಹಾಕುತ್ತಿದ್ದಳು. ಜಡೆ ಸ್ವಲ್ಪ ಲೂಸಾದ್ರೂ ನನಗೆ ಇರುಸುಮುರುಸು ಆಗೋದು' ಅಂದಳು. ಆಗ ಮತ್ತೊಬ್ಬ ಗೆಳತಿಯ ಮಗಳು, 'ಈಗ ಹಂಗೇನಿಲ್ಲಪ್ಪ, ನಾನಂತೂ ಸ್ವಲ್ಪ ಲೂಸು, ನಮ್ಮಮ್ಮ ಫುಲ್ ಲೂಸು' ಎಂದು ಹೇಳಿದಾಗ ಅಲ್ಲಿ ಸೂರು ಹಾರಿ ಹೋಗುವಂತಹ ನಗು.

**ಶಾಂತಾ ಕೆ.ಪಿ.**

ಚಿತ್ರಗಳು: ಗಣೇಶ ಆಚಾರ್ಯ